# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 231/22 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | **ಗೌರಮ್ಮ** | |
| ಗಂಡನ ಹೆಸರು | **ಸಣ್ಣ ಸೋಮಾಚಾರಿ** | ಸಾಕ್ಷಿಗೆ ದಿಃ **23.12.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **45 ವರ್ಷ** | |
| ಉದ್ಯೋಗ | **ಗೃಹಿಣಿ** | ಪಿ.ಡಬ್ಲ್ಯೂ **-05** |
| ವಾಸ ಸ್ಥಳ | **ಅನಸಾಲೆ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.** | ಸಿ.ಡಬ್ಲ್ಯೂ **-11** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-12 ನನ್ನ ಗಂಡ ಆಗಬೇಕು. ಫ್ರಾಸಾ-1 ಚಾಸಾ-13 ಮತ್ತು ಚಾಸಾ-14, ನನ್ನ ಸಹೋದರಿಯರು ಇರುತ್ತಾರೆ. ಫ್ರಾಸಾ-3, ಚಾಸಾ-8 ನನ್ನ ತಂಗಿಯ ಮಕ್ಕಳು ಇರುತ್ತಾರೆ. ಚಾಸಾ-15, ಚಾಸಾ-14 ರವರ ಗಂಡ ಇರುತ್ತಾರೆ. ಚಾಸಾ-16 ನನ್ನ ಸಂಬಂಧಿಕರು ಇರುತ್ತಾರೆ. ಮೃತ ನಂಜಮ್ಮ ನನಗೆ ತಾಯಿ ಆಗಬೇಕು. ಆರೋಪಿ-1 ರಿಂದ 3 ರವರು ನಮ್ಮ ಅಣ್ಣನ ಮಕ್ಕಳು ಇರುತ್ತಾರೆ. ಆರೋಪಿ ನಾಗಮ್ಮ ನಮ್ಮ ಅಣ್ಣನ ಹೆಂಡತಿ ಇರುತ್ತಾಳೆ. ಮೈಸೂರಿನ ಹೆಬ್ಬಾಳದಲ್ಲಿ ಮನೆ ಇದ್ದು, ಸದರಿ ಮನೆಯಲ್ಲಿ ಎರಡನೇ ಅಂತಸ್ತಿನಲ್ಲಿ ನಮ್ಮ ತಾಯಿಯು ವಾಸವಾಗಿದ್ದರು. ಮೊದಲನೇ ಅಂತಸ್ತಿನಲ್ಲಿ ನಮ್ಮ ಅಣ್ಣನ ಹೆಂಡತಿ ಮಕ್ಕಳು ವಾಸವಾಗಿದ್ದರು, ನೆಲ ಮಹಡಿಯನ್ನು ಬಾಡಿಗೆಗೆ ಕೊಟ್ಟಿದರು, ನಮ್ಮ ತಾಯಿಯು ಬೇರೆ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದರು, ನಮ್ಮ ತಾಯಿಗೆ ಆರೋಪಿತರಿಗೂ ಹೊಂದಾಣಿಕೆ ಇರಲಿಲ್ಲ, ನಮ್ಮ ತಾಯಿ ಅವರೇ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ವಾಸವಾಗಿದ್ದರು. ಆರೋಪಿತರು ನಮ್ಮ ತಾಯಿಯ ಯೋಗಕ್ಷೇಮ ನೋಡಿಕೊಳ್ಳುತ್ತಿರಲಿಲ್ಲ. ಆರೋಪಿತ-2 ಲಾವಣ್ಯ ಇವಳ ಮದುವೆ ಆಗಿತ್ತು, ಬಾಣಂತನಕ್ಕೆ

ತವರು ಮನೆಗೆ ಬಂದಿದ್ದಳು, ಸುಮಾರು ಒಂದು ವರ್ಷ, ಎರಡು ತಿಂಗಳ ಹಿಂದೆ, ಪ್ರಾಸಾ-3 ಶಿವಕುಮಾರ್ ಈತನು ಫೋನ್ ಮಾಡಿ ನನಗೆ ನಮ್ಮ ತಾಯಿ ಬಾಗಿಲು ತೆಗೆಯುತ್ತಿಲ್ಲ ನೀವು ಬನ್ನಿ ಎಂದು ಫೋನ್ ಮಾಡಿ ತಿಳಿಸಿದನು, ನಾವು ಮೈಸೂರಿಗೆ ಸಾಯಂಕಾಲ 3.15 ನಿಮೀಷಕ್ಕೆ ನಾವು ನಮ್ಮ ತಾಯಿಯ ಮನೆಗೆ ನಾನು, ನನ್ನ ಗಂಡ, ಮಗ ಬಂದಿದ್ದೆವು. ಆ ಸಮಯಕ್ಕೆ ನನ್ನ ಸಹೋದರಿಯರು ಹಾಗೂ ಅವರ ಗಂಡಂದಿರು ಮತ್ತು ಮಕ್ಕಳು ಮನೆಗೆ ಬಂದಿದ್ದರು. ಬಾಗಿಲು ಹಾಕಿದ್ದು ಇತ್ತು, ನಮ್ಮ ತಂಗಿಯ ಮಕ್ಕಳು ಬಾಗಿಲನ್ನು ಒದ್ದು ತೆಗೆದು ಒಳಗಡೆ ಹೋಗಿ ನೋಡಿದಾಗ ನಮ್ಮ ತಾಯಿ ಹಾಸಿಗೆಯಲ್ಲಿ ಮಲಗಿದ್ದರು ಹಾಗೂ ಮೃತಪಟ್ಟಿದ್ದರು, ನಮ್ಮ ತಾಯಿಯ ದೇಹದ ಮೇಲೆ ಹಣೆಗೆ, ಬಲ ಕತ್ತು, ಕೈ ಮತ್ತು ಕಾಲಿಗೆ ಏಟಾಗಿತ್ತು.

ನಮ್ಮ ತಾಯಿಯ ಕೊಲೆ ಆಗಿದೆ ಎಂದು ನನ್ನ ಸಹೋದರಿ ಆರೋಪಿತರ ಮೇಲೆ ಫಿರ್ಯಾದಿ ಕೊಟ್ಟಿರುತ್ತಾಳೆ. ಪೊಲೀಸರು ಸ್ಥಳಕ್ಕೆ ಬಂದು, ಸ್ಥಳವನ್ನು ನೋಡಿ, ಶವವನ್ನು ಕೆ.ಆರ್.ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನಮ್ಮ ಅಣ್ಣ ಮೃತಪಟ್ಟ ನಂತರ ನಾವು ಆರೋಪಿತರ ಮನೆಗೆ ಹೋಗಿರುವುದಿಲ್ಲ. ನಮ್ಮ ತಾಯಿ ನಮ್ಮ ಮನೆಗೆ ವರ್ಷಕ್ಕೆ ಎರಡು, ಮೂರು ಸಲಾ ಬರುತ್ತಿದ್ದರು, ಆರೋಪಿತರ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದರು, ನಾನು ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದು ಸಮಾಧಾನ ಮಾಡುತ್ತಿದ್ದೆನು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿತರೇ ನಮ್ಮ ತಾಯಿಯ ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿರುತ್ತದೆ.

**ಪಾಟೀಸವಾಲು :- ಆರೋಪಿತರ ಪರ ವಕೀಲರಿಂದಃ-**

ನಾನು ಶಾಲೆ ಓದಿರುವುದಿಲ್ಲ, ನಾನು ಅವಿದ್ಯಾವಂತಳು ಇರುತ್ತೇನೆ. ನಾಗಮ್ಮ ನನಗೆ ಅತ್ತಿಗೆ ಆಗಬೇಕು. ನಮ್ಮ ಅಣ್ಣ ಜೀವಂತ ಇದ್ದಾಗ ನಮ್ಮ ಅಕ್ಕ-ತಂಗಿಯರ ಮದುವೆ ಆಗಿದೆ ಎಂದರೆ ಸರಿ ಇದೆ. ನಮ್ಮ ಅಣ್ಣ ಜೀವಂತ ಇದ್ದಾಗ ನಮ್ಮ ಮತ್ತು ಆರೋಪಿತರ ಸಂಬಂಧ ಸರಿಯಾಗಿ ಇತ್ತು. ನಾನು ನಮ್ಮ ಅಣ್ಣನ ಮನೆಗೆ ಬರುತ್ತಿರಲಿಲ್ಲ, ಅವರೇ ನಮ್ಮ ಮನೆಗೆ ಬಂದು ಮಾತಾಡಿಸಿಕೊಂಡು ಹೋಗುತ್ತಿದ್ದರು. ನಮ್ಮ ಪಿತ್ರಾರ್ಜಿತ ಆಸ್ತಿ ಮಾಡಿ ನಮ್ಮ ಅಣ್ಣ

ಮನೆ ಕಟ್ಟಿಕೊಂಡಿದ್ದರು, ನಮ್ಮ ಅಣ್ಣ ಒಬ್ಬನೇ ಇದ್ದು, ಅವನೇ ಚೆನ್ನಾಗಿ ಇರಲಿ ಎಂದು ನಾವು ಯಾವುದೇ ಆಸ್ತಿಗೆ ಆಸೆ ಪಟ್ಟಿರಲಿಲ್ಲ. ನೆಲ ಮಹಡಿಯನ್ನು ನಮ್ಮ ಅಣ್ಣ ಸ್ವತಃ ಆಧಾಯದಿಂದ ಕಟ್ಟಿಕೊಂಡಿದ್ದರು, ಒಂದು ಮತ್ತು ಎರಡನೇ ಅಂತಸ್ತುಗಳು ನಮ್ಮ ಹಿರಿಯರ ಆಸ್ತಿ ಮಾರಿ ಕಟ್ಟಿಕೊಂಡಿದ್ದರು. ನಮ್ಮ ಅಣ್ಣ ಬದುಕಿರುವಾಗ ಆಸ್ತಿಯ ಬಗ್ಗೆ ನಾವು ಯಾವುದೇ ಆಕ್ಷೇಪಣೆ ಮಾಡಿರುವುದಿಲ್ಲ. ನಮ್ಮ ಅಣ್ಣ ಮೃತಪಟ್ಟ ಮೇಲೆ ಮನೆಯಲ್ಲಿ ನಮ್ಮ ಪಾಲು ಬೇಕು ಎಂದು ನಮ್ಮ ತಾಯಿಗೆ ಹೇಳಿ ಎಂದು ನಾವು ಹೇಳುತ್ತಿದ್ದೆವು ಎಂದರೆ ಸರಿಯಲ್ಲ. ನಮ್ಮ ತಾಯಿಗೆ ವಯಸ್ಸು ಆಗಿತ್ತು ಎಂದರೆ ಸರಿ ಇದೆ. ನಮ್ಮ ತಾಯಿಗೆ ಬಿ.ಪಿ., ಸಕ್ಕರೆ ಕಾಯಿಲೆ ಹಾಗೂ ಹೃದಯ ಸಂಬಂಧಿ ರೋಗಗಳು ಇದ್ದವು ಎಂದರೆ ಸರಿಯಲ್ಲ.

ನಮ್ಮ ತಾಯಿಯ ವೈದ್ಯಕೀಯ ಖರ್ಚು ಆರೋಪಿತರೇ ಭರಿಸುತ್ತಿದ್ದರು ಎಂದರೆ ಸರಿಯಲ್ಲ. 4 ನೇ ಆರೋಪಿ ನಮ್ಮ ತಾಯಿಯ ಹೆಸರಿನಲ್ಲಿ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ರೂ. 49,000/- ರೂಪಾಯಿ ಹಣ F.D ಮಾಡಿ ಹಣ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಸಾಕ್ಷಿಯು ಹೇಳುತ್ತಾರೆ ನಾವು ಸಹೋದರಿಯರು ನಮ್ಮ ತಾಯಿಯ ಹೆಸರಿನಲ್ಲಿ ರೂ. 49,000/- ರೂಪಾಯಿ ಹಣ F.D ಮಾಡಿದ್ದೇವೆ ಎಂದು ಹೇಳುತ್ತಾರೆ. ನಮ್ಮ ತಾಯಿಗೆ ಕಿರುಕುಳ ಕೊಟ್ಟು F.D ಹಣ ತೆಗೆದುಕೊಂಡು ನಾವು ಸಹೋದರಿಯರು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಸತ್ತಾಗ ಆ ವಿಚಾರ ನನಗೆ ನನ್ನ ತಂಗಿ ಮಗ ಶಿವಕುಮಾರ್ ನನಗೆ ಹೇಳಿರುತ್ತಾನೆ. ಅದಕ್ಕಿಂತ ಮೊದಲು ನಮ್ಮ ತಾಯಿ ಆರೋಪಿತರು ಕಿರುಕುಳ ಕೊಡುವ ಬಗ್ಗೆ ನನಗೆ ಹೇಳುತ್ತಿದ್ದರು. ಮನೆಗೋಸ್ಕರ ನಾವು ನಮ್ಮ ತಾಯಿಗೆ ಕಿರುಕುಳ ಕೊಡುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ತಾಯಿ ಮೃತಪಟ್ಟ ವಿಷಯ ತಿಳಿದ ನಂತರ ನಮ್ಮ ತಾಯಿ ವಾಸವಿದ್ದ ಮನೆಗೆ ಹೋಗಿದ್ದೆವು. ನಮ್ಮ ತಾಯಿ ವಾಸವಿದ್ದ ಮನೆಯ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಾನು ನಮ್ಮ ತಾಯಿಯ ಮನೆಗೆ ಹೋದಾಗ ನನ್ನ ಸಹೋದರಿಯರು, ಅವರ ಗಂಡಂದಿರು ಮತ್ತು ಮಕ್ಕಳು ಬಂದಿದ್ದರು. ನಾವೇ ಮನೆಯ ಕಿಟಕಿ ಗ್ಲಾಸ್ ಒಡೆದಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ರಾತ್ರಿ ಸಮಯದಲ್ಲಿ ಮೂತ್ರ್ರವಿರ್ಸಜನೆಗೆ ಬಂದಾಗ ಬಿದ್ದು, ಗಾಯ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ನೋಡಿದಾಗ ನಮ್ಮ ತಾಯಿ ಮೃತಪಟ್ಟಿದ್ದರು. ಆರೋಪಿತರು ನಮ್ಮ ತಾಯಿಯನ್ನು ಕೊಲೆ ಮಾಡಿದ್ದಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆಸ್ತಿಗೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಸಹೋದರಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ತಾರೀಖಿನಂದು ನಾನು ಹೆಬ್ಬಾಳ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುತ್ತೇನೆ, ಅಲ್ಲಿ ಯಾರು, ಯಾರು ಇದ್ದರು ಎಂದು ಕೇಳಿದ್ದಕ್ಕೆ ಸಾಕ್ಷಿಯು, ನಾವು ನಮ್ಮ ತಾಯಿ ಸತ್ತ ನೋವಿನಲ್ಲಿ ಇದ್ದೆವು, ಠಾಣೆಯಲ್ಲಿ ಯಾರು, ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಪೊಲೀಸರು ಹೇಳಿದ ಹಾಗೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಸತ್ಯವನೇ ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು